# ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಂ

ಸುರೇಶ ಮೂನ


**ರಾಮಕೃಷ್ಣ ಮಹಾಸಂಘಕ್ಕೆ ಸೇರಿದ ಸೇವಾಸಂಸ್ಥೆಗಳು ಬರಿಯ ಸೇವಾಕ್ಷೇತ್ರಗಳಲ್ಲ, ಅವುಗಳಲ್ಲಿ ನಡೆಯುತ್ತಿರುವುದು ಜೀವರೂಪೀ ಭಗವಂತನ ಪೂಜೆ. ಇದೇ ರಾಮಕೃಷ್ಣ ವಿವೇಕಾನಂದರು ಈ ಯುಗಕ್ಕೆ ನೀಡಿದ ತ್ಯಾಗ ಮತ್ತು ಸೇವೆ ಗಳೆಂಬ ಸೂತ್ರರೂಪದ ಸಾಧನಾಮಾರ್ಗ. ಈಗ ವಜ್ರ ಮಹೋತ್ಸವವನ್ನು ಆಚರಿಸುತ್ತಿರುವ ಬೆಂಗಳೂರಿನ ರಾಮಕೃಷ್ಣ ವಿದ್ಯಾರ್ಥಿ ಮಂದಿರಂ ಅಂತಹ ಒಂದು ಸಂಸ್ಥೆ. ಅದರ ಇತಿಹಾಸ ಮತ್ತು ಗರಿಮೆಗಳ ಸುಂದರ ನಿರೂಪಣೆ ಮಾಡಿರುವವರು ಬೆಂಗಳೂರಿನ ಹವ್ಯಾಸೀ ಬರಹಗಾರರೂ ರಾಮಕೃಷ್ಣ ಮಠದ ಭಕ್ತರೂ ಆದ ಶ್ರೀ ಸುರೇಶ ಮೂನ ಅವರು.**

**ಭಾ**ರತೀಯ ಸನಾತನ ಧರ್ಮ ಸಂಸ್ಕೃತಿ ಪರಂಪರೆಯನ್ನೂ ಹಾಗೂ ಯುವಶಕ್ತಿಯನ್ನೂ ತಮ್ಮ ಮಹಾನ್ ವ್ಯಕ್ತಿತ್ವ, ಧ್ಯೇಯೋದ್ದೇಶಗಳು, ಚಿಂತನೆ, ವಿಚಾರಗಳು ಹಾಗೂ ಸಂದೇಶ ಗಳ ಮೂಲಕ ಸರ್ವ ಕಾಲಕ್ಕೂ ಪ್ರತಿನಿಧಿಸುವ ಸ್ವಾಮಿ ವಿವೇಕಾನಂದರು, ನಮ್ಮ ದೇಶದ ಪ್ರಗತಿಯಾಗಬೇಕಾದರೆ ಬಹು ಮುಖ್ಯವಾಗಿ ಮೊದಲು ಬಡತನದ ನಿವಾರಣೆಯಾಗಬೇಕು ಮತ್ತು ಶ್ರೀಸಾಮಾನ್ಯನಿಗೂ ಶಿಕ್ಷಣ ಸಿಗುವಂತಾಗಬೇಕು ಎಂದು ತಿಳಿಸಿದ್ದಾರೆ. ಅವರ ಈ ಆದೇಶಕ್ಕನುಗುಣವಾಗಿ ಮುಖ್ಯವಾಗಿ ನಮ್ಮ ದೇಶದ ರಾಮಕೃಷ್ಣ ಮಹಾಸಂಘದ ಕೇಂದ್ರಗಳು ಜನರಿಗೆ ನಮ್ಮ ಆಧ್ಯಾತ್ಮಿಕ ಮತ್ತು ಧರ್ಮ ಸಂಸ್ಕೃತಿ ಪರಂಪರೆ ಇವುಗಳ ಬಗ್ಗೆ ಮಾರ್ಗದರ್ಶನ ನೀಡುತ್ತಿರುವುದಲ್ಲದೆ, ಬಡತನ ನಿವಾರಣೆ ಹಾಗೂ ಶ್ರೀಸಾಮಾನ್ಯರಿಗೆ ಶಿಕ್ಷಣ ನೀಡುವ ಸೇವಾ ಕಾರ್ಯಗಳಲ್ಲಿಯೂ ನಿರತವಾಗಿವೆ.

ಈ ನಿಟ್ಟಿನಲ್ಲಿ, ಬೆಂಗಳೂರಿನ ಬಸವನ ಗುಡಿ ರಸ್ತೆಯ ರಾಮಕೃಷ್ಣ ಮಠಕ್ಕೆ ಸೇರಿದ ಹಾಗೂ ಅದರ ಹಿಂಭಾಗದಲ್ಲೇ ಇರುವ **ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಂ** ಎಂಬ ವಿದ್ಯಾರ್ಥಿನಿಲಯವು ಕಳೆದ ಅರವತ್ತು ವರ್ಷಗಳಿಂದ ಯಾವ ಜಾತಿ ಮತ ಭೇದಭಾವಗಳಿಲ್ಲದೆಯೆ ವಿದ್ಯಾರ್ಥಿಸಮುದಾಯಕ್ಕೆ ಸಲ್ಲಿಸುತ್ತಿರುವ ಸೇವೆ ಸ್ತುತ್ಯವಾದುದು.

ಇದೊಂದು ನಗರದ ಅಪರೂಪದ ವಿದ್ಯಾರ್ಥಿನಿಲಯ. ಈ ವಿದ್ಯಾರ್ಥಿ ನಿಲಯವನ್ನು ಪ್ರವೇಶಿಸಿದ ಕೂಡಲೇ ಹೊರ ಜಗತ್ತಿನಿಂದ ದೂರವಾದುದೊಂದು ಗುರುಕುಲವಿದು ಎನ್ನಿಸುವುದು. ಕಟ್ಟಡದ ಸುತ್ತಲೂ ವಿಶಾಲವಾದ ಪ್ರದೇಶದಲ್ಲಿರುವ ಎತ್ತರದ ಗಿಡಮರಗಳು, ಪ್ರಶಾಂತ ನಿರ್ಮಲ ವಾತಾವರಣ, ವೇದಪಠಣ ಭಜನೆ ಇವುಗಳ ಸುಶ್ರಾವ್ಯ ನಿನಾದ, ವಿದ್ಯಾರ್ಥಿಗಳಿಗೆ ರಾಮಕೃಷ್ಣ ಮಠದ ಹಿರಿಯ ಯತಿವರ್ಯರುಗಳ ಸಹವಾಸ ಹಾಗೂ ಮಾರ್ಗದರ್ಶನ – ಹೀಗೆ ವಿದ್ಯಾರ್ಥಿಯ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಎಲ್ಲ ಅಂಶಗಳನ್ನೂ ಇಲ್ಲಿ ಕಾಣಬಹುದಾಗಿದೆ.

ವಜ್ರಮಹೋತ್ಸವದ ಆಚರಣೆಗೆ ಸಿದ್ಧಗೊಳ್ಳುತ್ತಿರುವ ಈ ವಿದ್ಯಾರ್ಥಿ ಮಂದಿರಂ ಪ್ರಾರಂಭಗೊಂಡದ್ದು ಅತ್ಯಂತ ಪುಟ್ಟ ಪ್ರಮಾಣದಲ್ಲಿ ಹಾಗೂ ವಿಶಿಷ್ಟ ರೀತಿಯಲ್ಲಿ. ಇದರ ಪರಿಕಲ್ಪನೆ ಈ ಮಠದ ಹಿರಿಯ ಯತಿವರ್ಯರಲ್ಲಿ ಒಬ್ಬರಾಗಿದ್ದ ಸ್ವಾಮಿ ತ್ಯಾಗೀಶಾನಂದಜಿಯವರದ್ದು. ಮಠದ ವಿವಿಧ ಸೇವಾ



ಸ್ವಾಮಿ ತ್ಯಾಗೀಶಾನಂದಜಿ

ಕಾರ್ಯಗಳಲ್ಲಿ ನಿರತರಾಗಿದ್ದ ಇವರಿಗೆ, ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬರುವ ಬಡವಿದ್ಯಾರ್ಥಿಗಳಲ್ಲಿ ಕೆಲವರಿಗಾದರೂ ಸ್ವಲ್ಪ ಅನುಕೂಲ ಮಾಡಿಕೊಡಬೇಕೆಂಬ ಯೋಚನೆ ೧೯೪೩ರಲ್ಲಿ ಬಂದಿತು. ಬಹಳ ಹಿಂದೆಯೇ ಇವರು ಕೇರಳದ ತ್ರಿಚೂರಿನಲ್ಲಿ ಹರಿಜನ ಬಾಲಕರ ವಿದ್ಯಾಭ್ಯಾಸಕ್ಕೆ ನೆರವು ನೀಡುತ್ತಿದ್ದರು. ಅಲ್ಲಿನ ರಾಮಕೃಷ್ಣ ಮಠದ ಕೇಂದ್ರದ ಸ್ಥಾಪನೆಯನ್ನೂ ಇವರು ಮಾಡಿದ್ದರು. ಇಲ್ಲಿಯೂ ವಿದ್ಯಾರ್ಥಿ ಮಂದಿರಂನ ಯೋಜನೆಗೆ ಪ್ರಥಮ ವಿದ್ಯಾರ್ಥಿಯಾಗಿ ಒಬ್ಬ ಹರಿಜನ ಬಾಲಕನೇ ದೊರೆತದ್ದು ಗಮನಾರ್ಹವಾದ ಸಂಗತಿ. ೧೯೪೪ರಲ್ಲಿ ಭೀಮ ಎಂಬ ಬಡ ಹರಿಜನ ಬಾಲಕನೊಬ್ಬ ಸ್ವಾಮಿ ತ್ಯಾಗೀಶಾನಂದಜಿಯವರಲ್ಲಿ ಬಂದು ತನ್ನ ವಿದ್ಯಾಭ್ಯಾಸಕ್ಕೆ ನೆರವು ನೀಡಬೇಕೆಂದು ಕೋರಿದ. ತಮ್ಮ ವಿದ್ಯಾರ್ಥಿ ಮಂದಿರಂನ ಯೋಜನೆಗೆ ತಾನಾಗಿ ಬಂದ ಈ ಬಾಲಕನನ್ನು ಕಂಡು ಇವರಿಗೆ ಸಂತೋಷವಾಯಿತು. "ಹೌದು, ಇಂದಿನಿಂದಲೇ ವಿದ್ಯಾರ್ಥಿ ಮಂದಿರಂ ಈ ಹರಿಜನ ಬಾಲಕನೊಂದಿಗೆ ಪ್ರಾರಂಭವಾಗಲಿ " ಎಂದು ಭೀಮನಿಗೆ ಆಶ್ರಮದಲ್ಲೇ ಒಂದು ಕೊಠಡಿಯಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಟ್ಟರು.

ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಂ ಪ್ರಾರಂಭಗೊಂಡ

ಮರು ವರ್ಷದ ಸ್ವಾಮಿ ವಿವೇಕಾನಂದರ ಜಯಂತಿ ಉತ್ಸವದಂದು ಮಠದ ಕೆಲವು ಭಕ್ತವೃಂದದವರು ಹಾಗೂ ಇತರ ದಾನಿಗಳು ಈ ಮಂದಿರಂಗಾಗಿ ಉದಾರವಾದ ನೆರವು ನೀಡಿದರು. ಡಾ. ಬಿ. ನಾರಾಯಣ ರಾವ್ ಅವರು ಬಸವನ ಗುಡಿ ರಸ್ತೆಯಲ್ಲಿ ಮರಾಠ ಹಾಸ್ಟೆಲ್‌ನ ಎದುರಿಗಿದ್ದ ತಮ್ಮ ಸ್ವಂತ ಮನೆಯನ್ನು ಉಚಿತವಾಗಿ ಮಂದಿರಂನ ಉಪಯೋಗಕ್ಕಾಗಿ ಬಿಟ್ಟುಕೊಟ್ಟರು. ಮೂರು ವರ್ಷಗಳ ಅನಂತರ ಅದೇ ಕಾಂಪೌಂಡಿನಲ್ಲಿ ಇನ್ನೆರಡು ಮನೆಗಳನ್ನು ನೀಡಿದರು. ಇದರಿಂದ ಮತ್ತಷ್ಟು ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ನೀಡಲು ಸಾಧ್ಯವಾಯಿತು. ಇನ್ನೊಬ್ಬ ದಾನಿಗಳು ೨೦ ವಿದ್ಯಾರ್ಥಿಗಳ ನಿರ್ವಹಣೆಗೆ ಪ್ರತಿ ತಿಂಗಳೂ ೨೦೦ ರೂಪಾಯಿಗಳಂತೆ ನೀಡಿದರು. ಆದರೆ ಕ್ರಮೇಣ ವಸ್ತುಗಳೆಲ್ಲ ದುಬಾರಿಯಾಗಿ ನಿರ್ವಹಣೆಯು ಕಷ್ಟವಾಗಿ ಸಂಖ್ಯೆಯನ್ನು ಹತ್ತಕ್ಕೆ ಇಳಿಸಲಾಯಿತು. ಅನಂತರ ವಿದ್ಯಾರ್ಥಿಗಳು ಸ್ವಲ್ಪ ಪ್ರಮಾಣದ ಹಣ ಪಾವತಿ ಮಾಡುವಂತೆ ಮಾಡಿ ಹದಿನೈದು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಾಯಿತು. ಈ ಮನೆಗಳಲ್ಲಿ ಇಷ್ಟು ವಿದ್ಯಾರ್ಥಿಗಳಿಗೆ ಜಾಗ ಸಾಲದಾದಾಗ ಎಂಟು ವಿದ್ಯಾರ್ಥಿಗಳಿಗೆ ಅದೇ ರಸ್ತೆಯಲ್ಲಿದ್ದ ರಾಮಕೃಷ್ಣ ಶತಮಾನೋತ್ಸವ ಸ್ಮಾರಕ ಕಟ್ಟಡದಲ್ಲಿ ಸ್ಥಳಾವಕಾಶ ಮಾಡಿ ಕೊಡಲಾಯಿತು.



ವಿದ್ಯಾರ್ಥಿ ಮಂದಿರಂನ ಭವ್ಯ ಕಟ್ಟಡ

"…..ವಿದ್ಯಾರ್ಥಿಗಳಿದ್ದ ಮನೆಗಳೂ ಅಷ್ಟೇನೂ ಅನುಕೂಲವಾಗಿರಲಿಲ್ಲ. ಚಿಕ್ಕ ಸ್ಥಳಾವಕಾಶ. ಅಲ್ಲಿಯೇ ಇದ್ದ ಬಾವಿಯಿಂದ ನೀರನ್ನು ಸೇದಿ ಬಳಸಬೇಕಾಗಿತ್ತು. ದೇವ ಮಂದಿರ ಹಾಗೂ ಪ್ರಾರ್ಥನಾ ಮಂದಿರಗಳು ಎರಡು ಪುಟ್ಟ ಕೊಠಡಿಗಳಾಗಿದ್ದವು. ಆದರೆ ಇದಾವುದೂ ಕಷ್ಟವೆನ್ನಿಸುತ್ತಿರಲಿಲ್ಲ. ವಿದ್ಯಾರ್ಥಿಗಳಲ್ಲಿ ಸ್ನೇಹ ಸೌಹಾರ್ದ ಭಾವನೆಗಳಿದ್ದವು. ಬೆಳಗಿನ ಜಾವದ ವ್ಯಾಯಾಮ, ಪ್ರಾರ್ಥನೆ, ಭಜನೆಯ ಅನಂತರ ಎಲ್ಲರಿಗೂ ಕುಡಿಯಲು ಹಾಲು ದೊರೆಯುತ್ತಿತ್ತು. ಒಂಬತ್ತು ಗಂಟೆಗೆ ಊಟವಾದನಂತರ ವಿದ್ಯಾರ್ಥಿಗಳು ತಮ್ಮ ಕಾಲೇಜುಗಳಿಗೆ ತೆರಳುತ್ತಿದ್ದರು. ಸಂಜೆ ಬಂದನಂತರ ಆಟ, ಭಜನೆ ಊಟ ಮತ್ತು ಅಧ್ಯಯನ – ಇದು ನಾವು ಪಾಲಿಸುತ್ತಿದ್ದ ದಿನಚರಿ. ಬುಧವಾರಗಳಂದು ವಿಶೇಷ ಪ್ರಾರ್ಥನೆ ಮತ್ತು ಪ್ರಸಾದಗಳಿರುತ್ತಿದ್ದವು. ಶನಿವಾರಗಳಂದು ಸ್ವಾಮಿ ತ್ಯಾಗೀಶಾನಂದಜಿಯವರು ಆಶ್ರಮದಲ್ಲಿ ನೈತಿಕ ಶಿಕ್ಷಣ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಅವರು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ವೈಯಕ್ತಿಕವಾಗಿ ವಿಚಾರಿಸುತ್ತ ಓದಿನಲ್ಲಿ ಮುಂದೆ ಬರುವಂತೆ ಪ್ರೋತ್ಸಾಹಿಸುತ್ತಿದ್ದರಲ್ಲದೆ ಸದ್ಗುಣಗಳನ್ನು ಮೈಗೂಡಿಸಿಕೊಳ್ಳಲೂ ಕಾರಣವಾಗಿದ್ದರು " ಎನ್ನುತ್ತಾರೆ ಮಂದಿರಂನ ಒಬ್ಬ ಹಳೆಯ ವಿದ್ಯಾರ್ಥಿಗಳಾದ ಎಚ್.ಎನ್. ವೇಣುಗೋಪಾಲ್‌ರವರು. ಈ ಮಧ್ಯೆ ೧೯೫೧ರಲ್ಲಿ ಮಂದಿರಂಅನ್ನು ಸ್ಥಾಪಿಸಿದ್ದ ಸ್ವಾಮಿ ತ್ಯಾಗೀಶಾನಂದಜಿಯವರು ದೈವಾಧೀನರಾದರು. ೧೯೫೨ರಲ್ಲಿ ಸ್ವಾಮಿ ಯತೀಶ್ವರಾನಂದಜಿಯವರು ಬುಲ್ ಟೆಂಪಲ್ ರಸ್ತೆಯ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿ ಬಂದರು. ಇವರ ಆಗಮನದೊಂದಿಗೆ ಆಶ್ರಮ ಹಾಗೂ ವಿದ್ಯಾರ್ಥಿ ಮಂದಿರಂ – ಇವೆರಡರ ಬೆಳವಣಿಗೆಗೂ ವಿಶೇಷವಾದ ಹೊಸ ಮಾರ್ಗದರ್ಶನ ದೊರೆಯಿತು.

ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ನ ಸೌಲಭ್ಯಗಳು ಮತ್ತು ವಾತಾವರಣವನ್ನು ಒದಗಿಸುವ ಒಂದು ಶಾಶ್ವತ ವ್ಯವಸ್ಥೆಯನ್ನು ಮಾಡಲೇಬೇಕೆಂದು ಸ್ವಾಮಿ ಯತೀಶ್ವರಾನಂದಜಿಯವರು ನಿರ್ಧರಿಸಿದರು. ಆಶ್ರಮದ ಹಿಂಭಾಗದಲ್ಲಿ ಇದ್ದ ಜಾಗದಲ್ಲಿ ಸುಮಾರು ನೂರು ವಿದ್ಯಾರ್ಥಿಗಳಿಗೆ ಆಗುವ ಒಂದು ಕಟ್ಟಡವನ್ನು ಕಟ್ಟುವುದು ಮತ್ತು ಅವರ ಕ್ರೀಡಾ ಚಟುವಟಿಕೆಗಳಿಗಾಗಿ ಒಂದು ವಿಶಾಲವಾದ ಆಟದ ಮೈದಾನವನ್ನು ನಿರ್ಮಿಸುವುದು ಈ ಯೋಜನೆಯಲ್ಲಿ ಸೇರಿತ್ತು. ಇದರ ಅಂದಾಜು ವೆಚ್ಚ ಸುಮಾರು ಮೂರು ಲಕ್ಷ ರೂಪಾಯಿಗಳು. ಆ ವೇಳೆಗಾಗಲೇ ರಾಮಕೃಷ್ಣ ಆಶ್ರಮವು ಪ್ರಾರಂಭವಾಗಿ ಐದು ದಶಕಗಳಿಗೂ ಮೇಲಾಗಿತ್ತು. ಭಕ್ತರ ಸಂಖ್ಯೆಯೂ ಹೆಚ್ಚಿನ ಪ್ರಮಾಣದಲ್ಲಿತ್ತಲ್ಲದೆ ಇತರ ಜನಸಾಮಾನ್ಯರಿಗೂ ಕೂಡ ಸಂಸ್ಥೆಯ ಬಗ್ಗೆ ಗೌರವವಿತ್ತು. ಹೀಗಾಗಿ ಮಂದಿರಂನ ಕಟ್ಟಡ ನಿರ್ಮಾಣ ಯೋಜನೆಗೆ ಆರ್ಥಿಕ ನೆರವು ಒದಗಲಾರಂಭಿಸಿತು. ಮೈಸೂರು ಸರಕಾರವೂ ಈ ಯೋಜನೆಗೆ ಮೆಚ್ಚುಗೆ ಸೂಚಿಸಿ ಎಪ್ಪತ್ತೆರಡು ಸಾವಿರ ರೂಪಾಯಿಗಳ ಉದಾರ ಸಹಾಯ ನೀಡಿತು. ಹಾಗೂ ಅದು ಈ ಕಟ್ಟಡ ನಿರ್ಮಾಣಕ್ಕೆ ನೆಲದ ಪರಿವರ್ತನೆಗೆ ತಗಲುವ ವೆಚ್ಚವನ್ನೂ ತೆಗೆದುಕೊಳ್ಳಲಿಲ್ಲ. ಆಗಿನ ಕಾನೂನಿನ ಪ್ರಕಾರ ಕೇಂದ್ರ ಸರ್ಕಾರಕ್ಕೂ ಈ ಬಗ್ಗೆ ತಿಳಿಸಬೇಕಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳೂ ರಾಮಕೃಷ್ಣ ಮಹಾ ಸಂಘದೊಡನೆ ನಿಕಟ ಸಂಪರ್ಕವಿದ್ದವರೂ ಆಗಿದ್ದ ಶ್ರೀ ಕುವೆಂಪು ಅವರು ಭಾರತ ಸರಕಾರದ ಶಿಕ್ಷಣ ಇಲಾಖೆಗೆ ಹೀಗೆ ಪತ್ರ ಬರೆದರು :



ವಿದ್ಯಾರ್ಥಿ ಮಂದಿರಂನ ಪೂಜಾಗೃಹ

" ನಾನು ರಾಮಕೃಷ್ಣ ಮಹಾಸಂಘದ ಚಟುವಟಿಕೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದೇನೆ. ಅದು ಇಡೀ ದೇಶದಲ್ಲಿ ಅನುಪಮ ಸೇವೆಯನ್ನು ಸಲ್ಲಿಸುತ್ತಿದೆ. ಇಂತಹ ಕೇಂದ್ರಗಳಲ್ಲೇ ಜನ ಸಾಮಾನ್ಯರು ಉತ್ತಮ ಆದರ್ಶ ಮತ್ತು ಧ್ಯೇಯೋದ್ದೇಶಗಳೊಂದಿಗೆ ರಾಷ್ಟ್ರದ ಒಳಿತಿಗಾಗಿ ದುಡಿಯುವಂತೆ ಪ್ರೇರೇಪಣೆ ಮತ್ತು ಮಾರ್ಗದರ್ಶನಗಳು ದೊರಕುವುದು. ಹೀಗಾಗಿ ಶ್ರೀರಾಮಕೃಷ್ಣ ಆಶ್ರಮವು ತೆಗೆದುಕೊಂಡಿರುವ ಯೋಜನೆಗೆ ಕೇಂದ್ರ ಸರಕಾರವು ಹೆಚ್ಚಿನ ನೆರವು ನೀಡಬೇಕೆಂದು ನಾನು ಈ ಮೂಲಕ ಕೋರುತ್ತೇನೆ..."

ಹೀಗೆ ನೆರವು ಎಲ್ಲ ಕಡೆಯಿಂದ ಬಂದದ್ದರಿಂದ ಕೂಡಲೇ ಯೋಜನೆಯನ್ನು ಕೈಗೊಳ್ಳಲು ಅನುಕೂಲವಾಯಿತು. ಆಗ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ಮಾಧವಾನಂದಜಿಯವರು ಮಂದಿರಂನ ಕಟ್ಟಡದ ಶಂಕು ಸ್ಥಾಪನೆ ಕಾರ್ಯವನ್ನು ನೆರವೇರಿಸಿದರು. ೧೯೫೬ರ ಜನವರಿ ೩ರಂದು ವಿದ್ಯಾರ್ಥಿಗಳನ್ನು ಬಾಡಿಗೆ ಮನೆಯಿಂದ ಮಂದಿರಂನ ಸ್ವಂತ ಕಟ್ಟಡಕ್ಕೆ ವರ್ಗಾಯಿಸಲಾಯಿತು. ಇನ್ನು ಪ್ರಾರ್ಥನಾ ಮಂದಿರ, ಗ್ರಂಥಾಲಯ ಮತ್ತು ಆಟದ ಮೈದಾನಗಳು – ಇವೆಲ್ಲವೂ ಸಿದ್ಧಗೊಳ್ಳಬೇಕಾಗಿತ್ತು. ಇವೆಲ್ಲವೂ ಮುಂದಿನ ಎರಡು ವರ್ಷಗಳಲ್ಲಿ ಸಂಪೂರ್ಣಗೊಂಡವು. ಮೂವತ್ತೈದು ವಸತಿ ಕೊಠಡಿಗಳು, ಉಗ್ರಾಣ, ಊಟದ ಹಾಲ್ ಮತ್ತು ಅಡುಗೆ ಮನೆ, ಪ್ರಾರ್ಥನಾ ಮಂದಿರ, ಅಧ್ಯಯನ ಕೊಠಡಿ, ಒಳಾಂಗಣ ಕ್ರೀಡೆ ಮತ್ತು ವ್ಯಾಯಾಮ ಶಾಲೆ ಮುಂತಾದ ಸೌಲಭ್ಯಗಳೊಂದಿಗೆ ಇದು ನಗರದ ಒಂದು ಉತ್ತಮ ವಿದ್ಯಾರ್ಥಿನಿಲಯವಾಗಿ ರೂಪುಗೊಂಡಿತು. ಈ ಯೋಜನೆಯ ನಿರ್ವಹಣೆಯಲ್ಲಿ ಆಗ ಮಂದಿರಂನ ಮೇಲ್ವಿಚಾರಕರಾಗಿದ್ದ ಸ್ವಾಮಿ ಋತಾತ್ಮಾನಂದಜೀಯವರು ವಹಿಸಿದ ಪಾತ್ರ ಪ್ರಮುಖವಾದದ್ದು. ಅವರು ಅತ್ಯಂತ ಪ್ರೀತಿ ವಿಶ್ವಾಸಗಳೊಂದಿಗೆ ವಿದ್ಯಾರ್ಥಿಗಳನ್ನು ನೋಡಿಕೊಳ್ಳುತ್ತಿದ್ದರಲ್ಲದೆ ಕಟ್ಟಡದ ನಿರ್ಮಾಣ ಮತ್ತು ಅದರ ಸುತ್ತಲಿನ ಉದ್ಯಾನವನದ ಬೆಳವಣಿಗೆಯ ಜವಾಬ್ದಾರಿಯನ್ನು ಕೂಡ ಸಮರ್ಪಕವಾಗಿ ನಿರ್ವಹಿಸಿದರು. ಹೀಗೆ ಇವರು ೧೯೪೩ರಿಂದ ೧೯೬೦ರವರೆಗೂ ಕಾರ್ಯ ನಿರ್ವಹಿಸಿದನಂತರ ಅವರ ಸ್ಥಾನಕ್ಕೆ ಬಂದವರು ಸ್ವಾಮಿ ಪ್ರಬುದ್ಧಾನಂದಜಿಯವರು.

ಮಂದಿರಂನ ಕಟ್ಟದ ನಿರ್ಮಾಣ, ಆಶ್ರಮದಲ್ಲಿ ಬಾಲಕ ಸಂಘದ ಪ್ರಾರಂಭ ಮುಂತಾದ ಪ್ರಗತಿಪರ ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸ್ವಾಮಿ ಯತೀಶ್ವರಾನಂದಜಿಯವರು ೧೯೬೬ರಲ್ಲಿ ದೈವಾಧೀನರಾದರು. ಆಗ ಸ್ವಾಮಿ ಪ್ರಬುದ್ಧಾನಂದರು ಆಶ್ರಮದ ಅಧ್ಯಕ್ಷರಾದರು. ಮಂದಿರಂ ನಲ್ಲಿ ಅವರ ಸ್ಥಾನವನ್ನು ತುಂಬಿದವರು ಸ್ವಾಮಿ ತದ್ರೂಪಾನಂದಜಿಯವರು. ಅವರು ಹಿಂದಿ ನವರು ಪ್ರಾರಂಭಿಸಿದ ಎಲ್ಲ ರಚನಾತ್ಮಕ ಕಾರ್ಯಗಳನ್ನು ಮುಂದುವರೆಸಿದರು. ಅನಂತರ ೧೯೭೦ರಲ್ಲಿ ಸ್ವಾಮಿ ಸಂಧ್ಯಾನಂದಜಿಯವರು ಮೇಲ್ವಿಚಾರಕರಾದರು ಮತ್ತು ಸ್ವಾಮಿ ಆದಿ ದೇವಾನಂದಜಿಯವರು ಆಶ್ರಮದ ಅಧ್ಯಕ್ಷರಾದರು. ಮಂದಿರಂನಲ್ಲಿ ೧೯೭೫ರಿಂದ ೧೯೭೬ರವರೆಗೆ ಮುಖ್ಯಸ್ಥರಾಗಿದ್ದವರು ಸ್ವಾಮಿ ಪ್ರಮಥೇಶಾನಂದಜಿಯವರು. ಅಪಾರ ಅನುಭವವಿದ್ದ ಇವರಿಬ್ಬರೂ ವಿದ್ಯಾರ್ಥಿಗಳ ಸೌಲಭ್ಯವನ್ನು ಮತ್ತಷ್ಟು ಉತ್ತಮಗೊಳಿಸಲು ಶ್ರಮಿಸಿದರು. ೧೯೮೩ರಲ್ಲಿ ಸ್ವಾಮಿ ಚಿದಾನಂದಜಿಯವರು ಅಧ್ಯಕ್ಷರಾಗಿ ೧೯೮೮ರವರೆಗೆ ಕಾರ್ಯ ನಿರ್ವಹಿಸಿದರು. ೧೯೮೮ರಿಂದ ಈಗಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜಿಯವರು ಮಂದಿರಂನ ಸೂಕ್ತ ನಿರ್ವಹಣೆಗೆ ಮಾರ್ಗದರ್ಶನ ನೀಡುತ್ತ ಬಂದಿದ್ದಾರೆ. ೧೯೭೬ರಿಂದ ೨೦೦೧ ರವರೆಗೆ ಸುಮಾರು ೨೬ವರ್ಷಗಳ ದೀರ್ಘಕಾಲ ಮಂದಿರಂನ ಅಭಿವೃದ್ಧಿ ಕಾರ್ಯನಿರ್ವಹಣೆಯಲ್ಲಿ ತೊಡಗಿದ್ದವರು ಸ್ವಾಮಿ ವಿಷ್ಣುಮಯಾನಂದಜಿಯವರು. ೨೦೦೧ರ ಜೂನ್ ೨೦ರಿಂದ ಸ್ವಾಮಿ ಸ್ವಾತ್ಮಾರಾಮಾನಂದಜಿಯವರು ಈ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ.

ಇನ್ನು ಈ ಮಂದಿರಂಗೆ ಗುರುಕುಲದ ಸ್ವರೂಪವನ್ನು ನೀಡುವ ಪ್ರಮುಖ ಅಂಶಗಳೆಂದರೆ ವಿದ್ಯಾಭ್ಯಾಸದೊಂದಿಗೇ ವಿದ್ಯಾರ್ಥಿಗಳ ಸಂಪೂರ್ಣ ವ್ಯಕ್ತಿತ್ವನಿರ್ಮಾಣಕ್ಕೆ ಪೂರಕವಾದ ಕಾರ್ಯಕ್ರಮಗಳು. ಮೊದಲನೆಯದು ಇಲ್ಲಿ ಪ್ರತಿ ವರ್ಷವೂ ನಡೆಯುವ ವಿದ್ಯಾರ್ಥಿ ಹೋಮ. ಇದೊಂದು ಅಪರೂಪದ ಕಾರ್ಯಕ್ರಮ. ಮಂದಿರಂನ ಹಳೆಯ ವಿದ್ಯಾರ್ಥಿಗಳು ಹೊಸದಾಗಿ ಬಂದ ವಿದ್ಯಾರ್ಥಿಗಳನ್ನು ಶಾಸ್ತ್ರೋಕ್ತವಾಗಿ ಆಹ್ವಾನಿಸುವ ಮತ್ತು ವಿದ್ಯಾರ್ಥಿ ಜೀವನದ ಪ್ರತಿಜ್ಞಾವಿಧಿಯನ್ನು ಸ್ವೀಕರಿಸುವ ಒಂದು ಪ್ರಮುಖ ಕಾರ್ಯ ಇದಾಗಿರುತ್ತದೆ. ಹೀಗೆ ಬೆಳೆದ ಅನ್ಯೋನ್ಯ ಸಂಬಂಧವನ್ನು ಬಲಪಡಿಸುವ ಇತರ ಚಟುವಟಿಕೆಗಳೆಂದರೆ ಇಲ್ಲಿ

ಆಚರಿಸುವ ಹಬ್ಬಹರಿದಿನಗಳು. ಮಂದಿರಂನ ದಿನಾಚರಣೆ ಇಲ್ಲಿನ ಮತ್ತೊಂದು ಪ್ರಮುಖವಾದ ಕಾರ್ಯಕ್ರಮ. ವರ್ಷಾಂತ್ಯದಲ್ಲಿ ಗಣ್ಯವ್ಯಕ್ತಿಗಳ ಸಮ್ಮುಖದಲ್ಲಿ ನಡೆಯುವ ಈ ಕಾರ್ಯಕ್ರಮ ದಲ್ಲಿ ಮುಖ್ಯವಾಗಿ ಆದರ್ಶಪ್ರಾಯವಾದ ಒಂದು ನಾಟಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸುತ್ತಾರೆ.

ಹೀಗೆ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ವಾತಾವರಣವನ್ನು ಉಂಟುಮಾಡುವುದಲ್ಲದೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಅದಕ್ಕಾಗಿ ವಿಶೇಷ ವಿಷಯಗಳಲ್ಲಿ ನುರಿತ ಉಪಾಧ್ಯಾಯರುಗಳಿಂದ ತರಗತಿಗಳನ್ನು ಏರ್ಪಡಿಸಲಾಗುತ್ತದೆ. ಪೋಷಕರ ಸಭೆಗಳನ್ನು ಕೂಡ ಆಯೋಜಿಸಲಾಗುತ್ತದೆ. ಇದಲ್ಲದೆ ಪ್ರತಿವಾರವೂ ಒಂದು ಸಂಜೆ ಒಂದು ಗಂಟೆ ಕಾಲ ಹೊರಗಿನ ಪರಿಣಿತರು ಅಥವಾ ಅಧಿಕಾರಿಗಳನ್ನು ಕರೆಸಿ ಉಪಯುಕ್ತ ಉಪನ್ಯಾಸಗಳನ್ನು ನೀಡುವ ವ್ಯವಸ್ಥೆ ಇದೆ. ಹಳೆಯ ವಿದ್ಯಾರ್ಥಿಗಳು ವರ್ಷಕ್ಕೊಮ್ಮೆ ಸೇರಿ ಸಮಾವೇಶ ನಡೆಸಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ.

ಇಲ್ಲಿನ ವಿದ್ಯಾರ್ಥಿಗಳ ದಿನಚರಿಯಲ್ಲಿ ವಿದ್ಯಾಭ್ಯಾಸದಷ್ಟೇ ಆಟ, ಪ್ರಾರ್ಥನೆ, ಭಜನೆ, ಸದ್ಗ್ರಂಥಗಳ ಪಠಣ, ಆವರಣದ ಶುಚಿತ್ವ ಮುಂತಾದ ವಿಷಯಗಳಿಗೂ ಹೆಚ್ಚಿನ ಪ್ರಾಮುಖ್ಯತೆಯುಂಟು. "ಸಂಪೂರ್ಣ ಜಾತ್ಯತೀತ ವಾತಾವರಣದಲ್ಲಿರುವ ನಾವು ನಮ್ಮ ಮನೆಗಳಲ್ಲಿನ ಜಾತಿಮತಗಳನ್ನೇ ಮರೆತುಬಿಟ್ಟಿರುತ್ತೇವೆ. ನಮ್ಮ ಓದಿಗಾಗಿ ಊಟ, ವಸತಿಗಳನ್ನು ಒದಗಿಸುವುದು ಒಂದಂಶ. ಆದರೆ ಅದಕ್ಕೆಲ್ಲಕ್ಕಿಂತ ಹೆಚ್ಚಾಗಿ ಇಲ್ಲೇ ನಮ್ಮ ಸಂಪೂರ್ಣ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾದ ಎಲ್ಲ ಅಂಶಗಳೂ ಸಿಗುತ್ತವೆ. ಹೀಗಾಗಿ ಇಲ್ಲಿಂದ ಹೊರ ಪ್ರಪಂಚಕ್ಕೆ ನಾವು ಹೋದಾಗ ನಮ್ಮ ನಡೆ, ನುಡಿ ಹಾಗೂ ದೃಷ್ಟಿಕೋನವೆಲ್ಲವೂ ಇತರರಿಗಿಂತ ವಿಭಿನ್ನವಾಗಿಯೂ ಕ್ರಿಯಾತ್ಮಕವಾಗಿಯೂ ಇರುತ್ತವೆ" ಎನ್ನುತ್ತಾರೆ ಇಲ್ಲಿನ ಹಳೆಯ ವಿದ್ಯಾರ್ಥಿಗಳು.

ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಂನ ವಿದ್ಯಾರ್ಥಿಗಳು ದೇಶವಿದೇಶಗಳಲ್ಲಿ ವಿವಿಧ ಗಣ್ಯಸ್ಥಾನಗಳಲ್ಲಿ ಇದ್ದುಕೊಂಡು ತಮ್ಮ ಜಾಣ್ಮೆ, ಪ್ರತಿಭೆ ಹಾಗೂ ಕುಶಲತೆಗಳಿಂದ ಸೇವೆ ಸಲ್ಲಿಸುತ್ತ ಈ ಸಂಸ್ಥೆಯಲ್ಲಿ ತಮ್ಮ ವ್ಯಕ್ತಿತ್ವವು ರೂಪುಗೊಂಡ ಬಗೆಯ ಪ್ರತಿನಿಧಿಗಳಾಗಿದ್ದಾರೆ. ಇದರ ಇಬ್ಬರು ವಿದ್ಯಾರ್ಥಿಗಳು ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳಾದರು. ಅವರೆಂದರೆ ಪ್ರಬುದ್ಧ ಭಾರತ ಪತ್ರಿಕೆಯ ಸಂಪಾದಕರಾಗಿದ್ದ ಸ್ವಾಮಿ ತದ್ರೂಪಾನಂದಜಿಯವರು ಮತ್ತು ಬೆಂಗಳೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದು ಈಗ ಅಮೇರಿಕದಲ್ಲಿರುವ ಸ್ವಾಮಿ ಪ್ರಬುದ್ಧಾನಂದಜಿಯವರು.



ನೂತನವಾಗಿ ನಿರ್ಮಾಣವಾದ ವಿದ್ಯಾರ್ಥಿ ಮಂದಿರಂನ ಮುಖ್ಯದ್ವಾರ

ವಿಶ್ವ ಬ್ಯಾಂಕಿನ ಸಲಹೆಗಾರರಾಗಿದ್ದ ಶ್ರೀ ನಂಜುಂಡಯ್ಯ, ಬೇರೆ ಬೇರೆ ದೇಶಗಳಲ್ಲಿ ಭಾರತ ಸರ್ಕಾರದ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದ ಆರ್. ವೇಣುಗೋಪಾಲ್, ವಿಶ್ವದ ಹದಿನೈದು ಉನ್ನತ ಈ.ಎನ್.ಟಿ. ಪರಿಣತರಲ್ಲಿ ಒಬ್ಬರಾದ ಡಾ. ಮಹಾದೇವಯ್ಯ, ದೇಶದ ಖ್ಯಾತ ನ್ಯೂರೋ ಸರ್ಜನ್ ಮತ್ತು ಸ್ಪೈನಲ್ ಕಾರ್ಡ್ ತಜ್ಞರಾದ ಡಾ. ಎಡತೊರೆ ಪೋಹನ್, ರಕ್ಷಣಾ ಇಲಾಖೆಯ ಹಿರಿಯ ಅಧಿಕಾರಿ ಕೆ. ಎಂ. ರಾಮನಾಥ್, ಖ್ಯಾತ ನೆಫ್ರಾಲಜಿಸ್ಟ್ ಡಾ. ಶ್ರೀಪಾದರಾವ್, ಸ್ವಾತಂತ್ರ್ಯ ಹೋರಾಟಗಾರ ಶ್ರೀ ರಾಮಯ್ಯ – ಇವರೆಲ್ಲ ಮಂದಿರಂನ ಕೆಲವು ಗಣ್ಯ ಹಳೆಯ ವಿದ್ಯಾರ್ಥಿಗಳು.

ಇಲ್ಲಿಂದ ವಿದ್ಯಾಭ್ಯಾಸ ಪಡೆದು ಅನಂತರ ಪ್ರಾಧ್ಯಾಪಕರಾಗಿ, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ, ನ್ಯಾಷನಲ್ ಶಿಕ್ಷಣ ಸಂಸ್ಥೆಯ ಪ್ರಮುಖ ರೂವಾರಿಗಳಾಗಿ, ಶಿಕ್ಷಣ ತಜ್ಞರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಬೆಂಗಳೂರಿನ ಗಣ್ಯವ್ಯಕ್ತಿಗಳಾಗಿ ಪ್ರಸಿದ್ಧರಾಗಿರುವ ಡಾ. ಎಚ್. ನರಸಿಂಹಯ್ಯ ಅವರ ಅನುಭವ ಹೀಗಿದೆ :

"…..ಆಶ್ರಮದ ಎರಡು ವರ್ಷದ ಶಿಸ್ತು ಸಂಯಮ ನನ್ನ ಇಡೀ ಜೀವನದಲ್ಲಿ ಸಾಕಷ್ಟು ಪರಿಣಾಮವನ್ನು ಬೀರಿದೆ. ನನಗೆ ಸ್ವಾಮಿ ವಿವೇಕಾನಂದರ ಲೇಖನಗಳು, ಅವರ ಭಾಷಣಗಳು ಹೆಚ್ಚು ಸ್ಫೂರ್ತಿ ಕೊಟ್ಟವು. ಆಶ್ರಮದಲ್ಲಿ ಮೂಲಭೂತ ಮತಾಂಧತೆಗೆ ಪ್ರೋತ್ಸಾಹ ಇಲ್ಲ. ತನ್ನದೇ ಆದ ವಿಶಾಲ ಮನೋಭಾವದ ಉದಾತ್ತ ಧಾರ್ಮಿಕ, ಆಧ್ಯಾತ್ಮಿಕ ಚೌಕಟ್ಟಿನಲ್ಲಿ ಕೆಲಸಕಾರ್ಯಗಳನ್ನೂ ಸೇವೆಯನ್ನೂ ನಡೆಸಿಕೊಂಡು ಬರುತ್ತಿರುವ ಇದು ಒಂದು ಉತ್ತಮವಾದ ಸಂಸ್ಥೆ…."

ಇಂದಿಗೂ ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಂ ಇದೇ ಚೌಕಟ್ಟಿನಲ್ಲಿ ವಿದ್ಯಾರ್ಥಿ ಸಮುದಾಯಕ್ಕೆ ಅನುಪಮ ಸೇವೆ ಸಲ್ಲಿಸುತ್ತ ಇದೆ.